# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 1147 |
| ಸದಸ್ಯರ ಹೆಸರು | : | ಡಾ॥ ತೇಜಸ್ವಿನಿ ಗೌಡ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 20-12-2018 |
| ಉತ್ತರಿಸುವ ಸಚಿವರು | : | ಮಾನ್ಯ ಮುಖ್ಯಮಂತ್ರಿಗಳು |

| ಕ್ರಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿರುವ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಿಗೆ ಉನ್ನತ ಗುಣಮಟ್ಟದ ಕಟ್ಟಡ ಹಾಗೂ ಕಂಪ್ಯೂಟರ್ ನಂತಹ ಆಧುನಿಕತೆ ಕಲಿಕಾ ಸವಲತ್ತುಗಳನ್ನು ಕಲ್ಪಿಸಲಾಗಿದೆಯೇ; | ಹೌದು. ಹಂತಗಳಲ್ಲಿ ಕಲ್ಪಿಸಲಾಗುತ್ತಿದೆ. |
| ಆ) | ಹಾಗಿದ್ದಲ್ಲಿ ಎಷ್ಟು ಶಾಲೆಗಳಿಗೆ ಒದಗಿಸಲಾಗಿದೆ; ಎಷ್ಟು ಶಾಲೆಗಳಲ್ಲಿ ಕೊರತೆಯಿದೆ; (ಜಿಲ್ಲಾವಾರು ಮಾಹಿತಿ ನೀಡುವುದು.) | ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ ಯೋಜನೆಯಡಿ ಕೇಂದ್ರ ಸರ್ಕಾರದಿಂದ 74 ಆದರ್ಶ ವಿದ್ಯಾಲಯಗಳು, 254 ಉನ್ನತೀಕರಣ, 1626 ಬಲವರ್ಧನೆ ಯೋಜನೆಗಳಡಿ ಒಟ್ಟಾರೆ 1954 ಸರ್ಕಾರಿ ಪ್ರೌಢಶಾಲಾ ಕಟ್ಟಡ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ.<br>(ಜಿಲ್ಲಾವಾರು ಮಾಹಿತಿ **ಅನುಬಂಧ-01** ರಲ್ಲಿ ಒದಗಿಸಿದೆ)<br><br>ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ 4601 ಶಾಲೆಗಳನ್ನು ಇದುವರೆಗೆ ಕಂಪ್ಯೂಟರ್ ಸಹಾಯಿತ ಕಲಿಕೆ ಕಾರ್ಯಕ್ರಮದ ವ್ಯಾಪ್ತಿಗೆ ತರಲಾಗಿದೆ. ಇದು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳ ಶೇ.20.47 ರಷ್ಟು ವ್ಯಾಪ್ತಿಯಾಗುತ್ತದೆ. ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಓದುತ್ತಿರುವ 1010229 ಮಕ್ಕಳು ಈ ಕಾರ್ಯಕ್ರಮದ ಉಪಯೋಗ ಪಡೆದಿದ್ದಾರೆ.<br><br>ಸಮಗ್ರ ಶಿಕ್ಷಣ ಯೋಜನೆಯಡಿ ರಾಜ್ಯದಲ್ಲಿನ ಆಯ್ದ 100 ಪ್ರೌಢ ಶಾಲೆಗಳಲ್ಲಿ 9 ರಿಂದ 12 ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಆಸಕ್ತ ವಿದ್ಯಾರ್ಥಿಗಳಿಗೆ ವೃತ್ತಿ ಶಿಕ್ಷಣ ನೀಡಲಾಗುತ್ತಿದ್ದು, ಇದರಲ್ಲಿ ಮಾಹಿತಿ ತಂತ್ರಜ್ಞಾನ ಸೆಕ್ಟರ್‌ನ 75 ಶಾಲೆಗಳಲ್ಲಿ 4334 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ.<br>(ಶಾಲಾವಾರು ಪಟ್ಟಿಯನ್ನು **ಅನುಬಂಧ-02** ರಲ್ಲಿ ಒದಗಿಸಿದೆ)<br><br>2018-19ನೇ ಸಾಲಿನಲ್ಲಿ 750 ಸರ್ಕಾರಿ ಪ್ರೌಢಶಾಲೆಗಳಿಗೆ LCD & Laptop ಸಾಮಗ್ರಿಗಳನ್ನು ಪೂರೈಸಲಾಗುತ್ತಿದ್ದು, ಇನ್ನುಳಿದ 2242 ಸರ್ಕಾರಿ ಪ್ರೌಢಶಾಲೆಗಳಿಗೆ ಪೂರೈಸಲಾಗುವುದು.<br>(ಜಿಲ್ಲಾವಾರು ಮಾಹಿತಿ ಅನುಬಂಧ-03 ರಲ್ಲಿ ಒದಗಿಸಿದೆ)<br>ಸರ್ಕಾರಿ ಪ್ರಾಥಮಿಕ, ಪ್ರೌಢಶಾಲೆ ಮತ್ತು ಪದವಿ ಪೂರ್ವ ಕಾಲೇಜುಗಳಲ್ಲಿ ಶಿಕ್ಷಣದ ಗುಣಮಟ್ಟ ವೃದ್ಧಿಗಾಗಿ ತಂತ್ರಜ್ಞಾನ ಬೆಂಬಲಿತ ಕಲಿಕಾ ಕಾರ್ಯಕ್ರಮವನ್ನು TALP (Technology Assisted Learning Programme) 2016-17ನೇ ಸಾಲಿನಿಂದ 05 ವರ್ಷಗಳ ಕಾರ್ಯಕ್ರಮವಾಗಿ ಅನುಷ್ಠಾನಗೊಳಿಸಲಾಗುತ್ತಿದೆ. ಈ ಕಾರ್ಯಕ್ರಮದಡಿಯಲ್ಲಿ 1750 ಸರ್ಕಾರಿ ಪ್ರೌಢಶಾಲೆಗಳಿಗೆ ಪ್ರತಿ ಶಾಲೆಗೊಂದರಂತೆ ಲ್ಯಾಪ್‌ಟಾಪ್ ಮತ್ತು LCD ಪ್ರೊಜೆಕ್ಟರ್‌ಗಳನ್ನು ಪೂರೈಸಿದೆ. 1000 ಶಾಲೆಗಳಿಗೆ ಕಂಪ್ಯೂಟರ್ ಲ್ಯಾಬ್‌ನ್ನು ಸಿದ್ಧಗೊಳಿಸಿದೆ ಹಾಗೂ ಈ ಶಾಲೆಗಳಿಗೆ ಕಂಪ್ಯೂಟರ್ ಗಳನ್ನು ಒದಗಿಸುವ ಪ್ರಕ್ರಿಯೆ ಚಾಲನೆಯಲ್ಲಿದೆ. |

| | | |
|---|---|---|
| ಇ) | ಗ್ರಾಮೀಣ ಭಾಗದ ಸಾಮಾಜಿಕವಾಗಿ ಹಿಂದುಳಿದ ಆರ್ಥಿಕವಾಗಿ ಕಷ್ಟದಲ್ಲಿರುವ ಮಕ್ಕಳಿಗೂ ಉತ್ತಮ ಗುಣಮಟ್ಟದ ಶಿಕ್ಷಣ ನೀಡಲು ಯಾವ ಕ್ರಮ ವಹಿಸಲಾಗಿದೆ. | ಗ್ರಾಮೀಣ ಭಾಗದ ಸಾಮಾಜಿಕವಾಗಿ ಹಿಂದುಳಿದ, ಆರ್ಥಿಕವಾಗಿ ಕಷ್ಟದಲ್ಲಿರುವ ಮಕ್ಕಳಿಗೂ ಉತ್ತಮ ಗುಣಮಟ್ಟದ ಶಿಕ್ಷಣ ನೀಡಲು ರಾಜ್ಯದಲ್ಲಿನ ಸರ್ಕಾರಿ ಶಾಲೆಗಳ ಶೈಕ್ಷಣಿಕ ಗುಣಮಟ್ಟ ಅಭಿವೃದ್ಧಿಗೊಳಿಸುವ ಸಂಬಂಧ **ಪ್ರತಿ ಮಗುವು ಶಾಲೆಯಲ್ಲಿ ಮತ್ತು ಉತ್ತಮ ಕಲಿಕೆಯೊಂದಿಗೆ** ಎಂಬ ನೀತಿ ಗುರಿಯನ್ನು ಆಧರಿಸಿ ಕೆಳಕಂಡ ಐದು ಗುಣಾತ್ಮಕ ಕಾರ್ಯಕ್ರಮಗಳನ್ನು ಯೋಜಿಸಿದೆ.<br>❖ ಶಿಕ್ಷಣ ಗುಣಮಟ್ಟ ಸುಧಾರಣ ಕಾರ್ಯಕ್ರಮ<br>❖ ಗುಣಮಟ್ಟ ಖಾತ್ರಿಯ ಉಪಕ್ರಮಗಳು<br>❖ ತಂತ್ರಜ್ಞಾನ ಆಧಾರಿತ ಕಲಿಕೆ<br>❖ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಕಗಳು<br>❖ ವಿದ್ಯಾರ್ಥಿಗಳನ್ನು ಪ್ರೇರೇಪಿಸುವ ಕಾರ್ಯಕ್ರಮಗಳು<br>ಮೇಲಿನ ಐದು ಕಾರ್ಯಕ್ರಮಗಳ ಅಡಿಯಲ್ಲಿ ಕೆಳಕಂಡ ಶೈಕ್ಷಣಿಕ ಗುಣಮಟ್ಟ ಬಲವರ್ಧನ ಕಾರ್ಯಕ್ರಮಗಳನ್ನು ಯೋಜಿಸಿ ಅನುಷ್ಠಾನಗೊಳಿಸಲಾಗುತ್ತಿದೆ.<br>❖ 1 ರಿಂದ 3ನೇ ತರಗತಿಗಳಲ್ಲಿ ಶಿಶುಕೇಂದ್ರಿತ, ಸಂತೋಷದಾಯಕ ನಲಿ–ಕಲಿ ಪದ್ಧತಿಯನ್ನು ಅಳವಡಿಸಲಾಗಿದೆ. ನಲಿ–ಕಲಿ ಬಲವರ್ಧನೆಗಾಗಿ ಹಲವಾರು ಚುಟವಟಿಕೆಗಳಾದ ಪಠ್ಯಕ್ರಮ ಪರಿಷ್ಕರಣೆ, ಶಿಕ್ಷಕರ ತರಬೇತಿ, ಕಾರ್ಯಕ್ರಮ ಅನುಷ್ಠಾನ ಮೌಲ್ಯಮಾಪನ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗಿದೆ.<br>❖ ಗಣಿತ ಕಲಿಕೆ ಬಲವರ್ಧನೆಗಾಗಿ 4 ಮತ್ತು 5ನೇ ತರಗತಿಗಳಿಗೆ ಗಣಿತ ಕಲಿಕಾ ಅಂದೋಲನಾ ಕಾರ್ಯಕ್ರಮ ಅನಷ್ಠಾನಗೊಳಿಸಿದ್ದು, ಶಾಲೆಗಳಿಗೆ ಗಣಿತ ಕಿಟ್‌ಗಳನ್ನು ವಿತರಿಸಿದೆ.<br>❖ ಶಿಕ್ಷಣ ಪ್ರತಿಷ್ಠಾನದ ಸಹ ಭಾಗಿತ್ವದಲ್ಲಿ ವಿದ್ಯಾರ್ಥಿಗಳ ಪ್ರತಿಭೆಯನ್ನು ಗುರುತಿಸಿ ಸಮಾನ ವಯಸ್ಕರ ಸಮೂಹದಿಂದ ಕಲಿಕೆ ಹಾಗೂ ವಿವಿಧ ರೀತಿಯ ಪ್ರೇರಿತ ಚಟುವಟಿಕೆ ಕಾರ್ಯಕ್ರಮಗಳ ಮೂಲಕ ಕಲಿಕೆಯನ್ನು ಉತ್ತಮಗೊಳಿಸುವ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗಿದೆ.<br>❖ ಕಲಿಕೆಯಲ್ಲಿ ಹಿಂದುಳಿದ ವಿದ್ಯಾರ್ಥಿಗಳ ಕಲಿಕೆಯನ್ನು ಉತ್ತಮಪಡಿಸುವ ಸಲುವಾಗಿ ರಾಜ್ಯದ ಆಯ್ದ ಜಿಲ್ಲೆಗಳಲ್ಲಿ ಓದು ಕರ್ನಾಟಕ ಕಾರ್ಯಕ್ರಮವನ್ನು ಜಾರಿಗೊಳಿಸಿದೆ.<br>❖ ಅರ್ಥ ಗ್ರಹಿಕೆಯೊಂದಿಗೆ ಓದು, ಬರಹ ಹಾಗೂ ಗಣಿತ ಕೌಶಲಗಳ ಬೆಳವಣಿಗೆಗಾಗಿ ಶಾಲಾ, ಕ್ಲಸ್ಟರ್, ಬ್ಲಾಕ್, ಜಿಲ್ಲಾ ಹಾಗೂ ರಾಜ್ಯ ಮಟ್ಟದಲ್ಲಿ ಸಂಪನ್ಮೂಲ ತಂಡಗಳನ್ನು ರಚಿಸಲಾಗಿದೆ.<br>❖ ವಿದ್ಯಾರ್ಥಿಗಳಲ್ಲಿ ಓದು, ಬರಹ ಹಾಗೂ ಗಣಿತದ ಮೂಲಭೂತ ಕೌಶಲಗಳ ಅಭಿವೃದ್ಧಿಗಾಗಿ ತರಗತಿಗಳಲ್ಲಿ ಅಗತ್ಯ ಚಟುವಟಿಕೆಗಳು, ಫ್ಲಾನೆಲ್ ಬೋರ್ಡ್, ವಾಚನಾ ಮೂಲೆಗಳ ಸ್ಥಾಪನೆ, ಅಕ್ಷರ ಚಪ್ಪರ ಇತ್ಯಾದಿ ಚಟುವಟಿಕೆಗಳನ್ನು ಹಮ್ಮಿಕೊಂಡಿದೆ.<br>❖ 'ಗುರುಚೇತನ' ಕಾರ್ಯಕ್ರಮದಡಿಯಲ್ಲಿ ಶಿಕ್ಷಕರ ಅಗತ್ಯತೆಗೆ ಅನುಗುಣವಾಗಿ ಮಾಡ್ಯೂಲ್‌ಗಳನ್ನು ಸಿದ್ಧಪಡಿಸಿ, ಶಿಕ್ಷಕರ ಅಗತ್ಯತೆಗೆ ಅನುಗುಣವಾಗಿ ತರಬೇತಿಯನ್ನು ನೀಡಲಾಗುತ್ತಿದೆ. |

| | | |
|---|---|---|
| | | ❖ ತಂತ್ರಜ್ಞಾನ ಆಧಾರಿತ ಬೋಧನಾ ಕಲಿಕಾ ಕಾರ್ಯಕ್ರಮ (ಟಿ.ಎ.ಎಲ್.ಪಿ) ದಡಿಯಲ್ಲಿ ಶಿಕ್ಷಕರಿಗೆ ತರಗತಿ ಬೋಧನೆಯಲ್ಲಿ ತಂತ್ರಜ್ಞಾನದ ಬಳಕೆಯ ಬಗ್ಗೆ ತರಬೇತಿ ನೀಡಲಾಗಿದೆ.<br>❖ ಪ್ರಾದೇಶಿಕ ಆಂಗ್ಲ ಭಾಷಾ ತರಬೇತಿ ಸಂಸ್ಥೆ (ಆರ್.ಐ.ಇ) ಬೆಂಗಳೂರು ವತಿಯಿಂದ ಶಿಕ್ಷಕರಿಗೆ ಆಂಗ್ಲ ಭಾಷೆ ಬೋಧನಾ ತರಬೇತಿ ನೀಡಲಾಗಿದೆ.<br>❖ ಗ್ರಾಮಾಂತರ ಪ್ರದೇಶಗಳಲ್ಲಿ 74 ಆದರ್ಶವಿದ್ಯಾಲಯಗಳ ಸ್ಥಾಪನೆ ಮೂಲಕ ಗ್ರಾಮೀಣ ಮಕ್ಕಳಿಗೆ ಆಂಗ್ಲ ಮಾಧ್ಯಮದಲ್ಲಿ ಶಿಕ್ಷಣ ಪಡೆಯುವ ಅವಕಾಶ ಕಲ್ಪಿಸಲಾಗಿದೆ.<br>❖ ಸರ್ಕಾರಿ ಶಾಲೆಗಳಲ್ಲಿ ಆಂಗ್ಲ ಭಾಷಾ ಬೋಧನೆಯನ್ನು ಬಲವರ್ಧನೆಗೂಳಿಸಲು ಶಿಕ್ಷಕರ ಸಾಮರ್ಥ್ಯ ಅಭಿವೃದ್ಧಿಗೆ ಬಿಟ್ರಿಷ್ ಕೌನ್ಸಿಲ್ ಸಂಸ್ಥೆಯೊಂದಿಗೆ ಎಂ.ಒ.ಯು. ಮಾಡಿಕೂಳ್ಳಲಾಗಿದೆ.<br>❖ ಪ್ರಸ್ತುತ ಸಾಲಿನಲ್ಲಿ 3389 ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರನ್ನು ನೇಮಕ ಮಾಡಿಕೊಳ್ಳಲಾಗುತ್ತಿದ್ದು ಇದರಲ್ಲಿ 1715 ಆಂಗ್ಲ ಭಾಷಾ ಶಿಕ್ಷಕರಿರುತ್ತಾರೆ.<br>❖ ಕಲಿಕಾ ಸಾಧನೆಗಳ ನಿರ್ವಹಣೆಗಾಗಿ ಮಾಹಿತಿ ತಂತ್ರಾಂಶ ಆಧಾರಿತ ವಿದ್ಯಾರ್ಥಿಗಳ ಸಾಧನೆಯನ್ನು ಜಾಡು ಹಿಡಿಯುವ (ಎಸ್.ಎ.ಟಿ.ಎಸ್) ವ್ಯವಸ್ಥೆ ಮೂಲಕ 1 ರಿಂದ 12ನೇ ತರಗತಿಯ ಎಲ್ಲಾ ವಿದ್ಯಾರ್ಥಿಗಳ ಮಾಹಿತಿಯನ್ನು ತಂತ್ರಾಂಶದಲ್ಲಿ ಸಂಗ್ರಹಿಸಲಾಗಿದೆ ಹಾಗೂ 86 ಲಕ್ಷ ವಿದ್ಯಾರ್ಥಿಗಳ ಆಧಾರ್ ನೋಂದಣಿ ಪೂರ್ಣಗೊಂಡಿರುತ್ತದೆ.<br>❖ 1 ರಿಂದ 8ನೇ ತರಗತಿ ಅನುಗುಣವಾಗಿ ಕಲಿಕಾ ಫಲಿತಗಳು ಸಿದ್ಧಪಡಿಸಿದ್ದು, ವಿದ್ಯಾರ್ಥಿಗಳಿಗೆ, ಪೋಷಕರಿಗೆ ಹಾಗೂ ಶಾಲೆಗಳಿಗೆ ಈ ಮಾಹಿತಿಯನ್ನು ತಲುಪಿಸಲಾಗಿದೆ.<br>❖ 4 ರಿಂದ 9ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ 36 ಲಕ್ಷ ವಿದ್ಯಾರ್ಥಿಗಳಿಗೆ ಗಣತಿ ಆಧಾರಿತ ಕಲಿಕಾ ಗುಣಮಟ್ಟ ಸಮೀಕ್ಷೆ ನಡೆಸಲಾಗಿದೆ. ಸಮೀಕ್ಷೆ ಫಲಿತಾಂಶವನ್ನು ಆಧರಿಸಿ, ಕಲಿಕೆಯಲ್ಲಿ ಹಿಂದುಳಿದ ಮಕ್ಕಳನ್ನು ಗುರುತಿಸಿ ಪರಿಹಾರ ಬೋಧನಾ ಕಾರ್ಯಕ್ರಮದ ಮೂಲಕ ವಿಶೇಷ ಕಲಿಕಾ ಅಭಿವೃದ್ಧಿ ಯೋಜನೆಯನ್ನು ರಾಜ್ಯದ ಎಲ್ಲಾ ಸರ್ಕಾರಿ ಪ್ರೌಢಶಾಲೆಗಳಲ್ಲಿ ಜಾರಿಗೊಳಿಸಿದೆ.<br>❖ ಪ್ರಸ್ತುತ ಸಾಲಿನಲ್ಲಿ 4 ರಿಂದ 10 ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ 36 ಲಕ್ಷ ವಿದ್ಯಾರ್ಥಿಗಳಿಗೆ ಗಣತಿ ಆಧಾರಿತ ಕಲಿಕಾ ಗುಣಮಟ್ಟ ಸಮೀಕ್ಷೆ ನಡೆಸಲಾಗಿದೆ.<br>❖ ಎನ್.ಸಿ.ಇ.ಆರ್.ಟಿ ಮೂಲಕ 3,5,8 ಮತ್ತು 10ನೇ ತರಗತಿ ವಿದ್ಯಾರ್ಥಿಗಳಿಗೆ ನಡೆಸಲಾದ ಕಲಿಕಾ ಗುಣಮಟ್ಟ ಸಮೀಕ್ಷೆಯಲ್ಲಿ ರಾಜ್ಯದ ಸಾಧನೆ ರಾಷ್ಟ್ರೀಯ ಮಟ್ಟಕ್ಕಿಂತ ಉತ್ತಮವಾಗಿರುತ್ತದೆ. |

| | | |
|---|---|---|
| | | ❖ 4 ರಿಂದ 9ನೇ ತರಗತಿಯ ವಿದ್ಯಾರ್ಥಿಗಳ ಕಲಿಕಾ ಸಾಧನಾ ಸಮೀಕ್ಷೆ ಮೂಲಕ 36 ಲಕ್ಷ ವಿದ್ಯಾರ್ಥಿಗಳ ಕಲಿಕಾ ಗುಣಮಟ್ಟವನ್ನು ಪರೀಕ್ಷಿಸಿದ್ದು, ಇದರ ಫಲಿತಾಂಶದ ಆಧಾರದ ಮೇಲೆ ಪರಿಹಾರ ಬೋಧನಾ ಕಾರ್ಯಕ್ರಮವನ್ನು ನಡೆಸಲಾಗುವುದು.<br>❖ ವಿಶ್ವಾಸಕಿರಣ ಕಾರ್ಯಕ್ರಮದ ಮೂಲಕ ಕಲಿಕೆಯಲ್ಲಿ ಹಿಂದುಳಿದ ಮಕ್ಕಳಿಗೆ ಮಧ್ಯಂತರ ರಜೆ ಅವಧಿ ಮತ್ತು ನಂತರದ ಶನಿವಾರಗಳ ಅಪರಾಹ್ನದ ಅವಧಿಯಲ್ಲಿ ಒಟ್ಟು 25 ದಿನಗಳು ವಿಶೇಷ ಪರಿಹಾರ ಬೋಧನಾ ಕಾರ್ಯಕ್ರಮವನ್ನು ನಡೆಸಲಾಗುತ್ತಿದೆ.<br>❖ ವಿದ್ಯಾರ್ಥಿಗಳಲ್ಲಿ ಶೈಕ್ಷಣಿಕ ಗುಣಮಟ್ಟ ಹೆಚ್ಚಿಸಲು ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯ (ಎಂ.ಹೆಚ್.ಆರ್.ಡಿ) ಭಾರತ ಸರ್ಕಾರವು, ರಾಷ್ಟ್ರೀಯ ಕೌಶಲ್ಯ ಅರ್ಹತಾ ಚೌಕಟ್ಟು (NSQF) ಎಂಬ ನೂತನ ಯೋಜನೆಯನ್ನು ಪ್ರಾರಂಭಿಸಲಾಗಿದ್ದು, ಸಾಮಾನ್ಯ ಶಿಕ್ಷಣದಲ್ಲಿ ವೃತ್ತಿ ಶಿಕ್ಷಣದ ವಿಷಯಗಳನ್ನು ವಿದ್ಯಾರ್ಥಿಗಳ ಆಸಕ್ತಿಗನುಗುಣವಾಗಿ ಅಳವಡಿಸಿ, ಉದ್ಯೋಗ ನಿರ್ವಹಿಸಲು ಅಗತ್ಯ ಕೌಶಲ್ಯಗಳು ಮತ್ತು ಸಾಮರ್ಥ್ಯಗಳ ಬಗ್ಗೆ ತರಬೇತಿಯನ್ನು 9 ರಿಂದ 12ನೇ ತರಗತಿಯ ವಿದ್ಯಾರ್ಥಿಗಳಿಗೆ ರಾಜ್ಯದ 150 ಶಾಲೆಗಳಲ್ಲಿ 11208 ವಿದ್ಯಾರ್ಥಿಗಳಿಗೆ ನೀಡಲಾಗುತ್ತಿದೆ.<br>❖ ಸರ್ಕಾರಿ ಪ್ರೌಢಶಾಲೆಗಳಲ್ಲಿ ವಿಜ್ಞಾನ ಸಾಮಗ್ರಿಗಳು, ಸ್ಪೋರ್ಟ್ಸ್ ಸಾಮಗ್ರಿ ಹಾಗೂ ತರಗತಿ ಪ್ರಕ್ರಿಯೆ ನಿರ್ವಹಣೆಗಾಗಿ ವಾರ್ಷಿಕ ರೂ. 50,000/- ಶಾಲಾ ಅನುದಾನ ನೀಡಲಾಗುತ್ತಿದೆ.<br>❖ 5 ಕಿ.ಮೀ. ವ್ಯಾಪ್ತಿಯಲ್ಲಿ ಪ್ರೌಢಶಾಲೆ ಲಭ್ಯತೆಯಿಲ್ಲದ ಪ್ರದೇಶಗಳಲ್ಲಿ 8ನೇ ತರಗತಿ ಹೊಂದಿರುವ ಹಿರಿಯ ಪ್ರಾಥಮಿಕ ಶಾಲೆಗಳನ್ನು 9 ಹಾಗೂ 10 ತರಗತಿಗಳಿಗೆ ಉನ್ನತೀಕರಿಸಲಾಗಿದೆ.<br>❖ ಪ್ರೌಢಶಾಲಾ ಶಿಕ್ಷಕರಿಗೆ ವಿಷಯಾದಾರಿತ ತರಬೇತಿಗಳನ್ನು ನೀಡುವ ಕಾರ್ಯಕ್ರಮ ಜಾರಿಯಲ್ಲಿದೆ.<br>❖ ಸರ್ಕಾರಿ ಶಾಲೆಗಳ ದಾಖಲಾತಿ ಹೆಚ್ಚಿಸಲು ಪ್ರೋತ್ಸಾಹದಾಯಕ ಉಪಕ್ರಮಗಳಾದ ಉಚಿತ ಪಠ್ಯಪುಸ್ತಕ, ಎರಡು ಜೊತೆ ಸಮವಸ್ತ್ರ, ಬೈಸಿಕಲ್, ಕ್ಷೀರ ಭಾಗ್ಯ, ಮಧ್ಯಾಹ್ನ ಉಪಹಾರ ಯೋಜನೆ, ಶೂ, ಸಾಕ್ಸ್ ಮತ್ತು ಬ್ಯಾಗ್ ಇತ್ಯಾದಿಗಳನ್ನು ವಿತರಿಸಲಾಗುತ್ತಿದೆ.<br>❖ ಗುಣಾತ್ಮಕ ಶಿಕ್ಷಣ ನೀಡಲು ಡಿ.ಎಸ್.ಇ.ಆರ್.ಟಿ ವತಿಯಿಂದ ಕೈಗೊಂಡಿರುವ ಕಾರ್ಯಕ್ರಮಗಳ ಕುರಿತು. (ಅನುಬಂಧ-04 ರಲ್ಲಿ ಒದಗಿಸಿದೆ) |
| ಈ) | ಗ್ರಾಮೀಣ ಮಕ್ಕಳಿಗೂ ಜಾಗತಿಕ ಸ್ಪರ್ಧಾಸ್ಥಿತಿ ಎದುರಿಸಲು ಸನ್ನದ್ಧರಾಗುವಂತೆ ಪಠ್ಯಕ್ರಮದಲ್ಲಿ ಪ್ರಾಥಮಿಕ ಹಂತದಲ್ಲಿಯೇ 'ಆಂಗ್ಲ' ಭಾಷೆ ಹಾಗೂ ಕಂಪ್ಯೂಟರ್ ಕಲಿಕಾ ತರಬೇತಿ ಸೇರಿಸಲಾಗಿದೆಯೇ? (ಜಿಲ್ಲಾವಾರು ಮಾಹಿತಿ ನೀಡುವುದು) | ಕಂಪ್ಯೂಟರ್ ಕಲಿಕೆಯ ಬಗ್ಗೆ (ಅ) ಉಪಪ್ರಶ್ನೆಯಲ್ಲಿ ಉತ್ತರಿಸಲಾಗಿದೆ.<br><br>ಆಂಗ್ಲಭಾಷೆ ತರಬೇತಿ ನೀಡುವ ಬಗ್ಗೆ ಸರ್ಕಾರಿ ಶಾಲೆಗಳಲ್ಲಿ 1ನೇ ತರಗತಿಯಿಂದಲೇ ಇಂಗ್ಲಿಷ್ ಭಾಷೆ ಕಲಿಸಲು ತೀರ್ಮಾನಿಸಲಾಗಿದೆ. 2018-19ನೇ ಸಾಲಿನಲ್ಲಿ ಎಸ್.ಎಸ್.ಎ. ವತಿಯಿಂದ ರಾಜ್ಯದಲ್ಲಿನ 204 ಸಂಪನ್ಮೂಲ ಶಿಕ್ಷಕರು ಹಾಗೂ 1710 ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಇಂಗ್ಲಿಷ್ ಭಾಷಾ ಕೌಶಲವನ್ನು ಅಭಿವೃದ್ಧಿಪಡಿಸಲು ಹಾಗೂ |

ತಂತ್ರಜ್ಞಾನದ ನೆರವಿನಿಂದ ಸಂವಹನ ಕೌಶಲ ಹೆಚ್ಚಿಸಲು 30 ದಿನಗಳ ದೀರ್ಘಕಾಲದ ಇಂಗ್ಲಿಷ್ ಭಾಷಾ ಸಬಲೀಕರಣ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಇದಕ್ಕಾಗಿ ರೂ.2.5 ಕೋಟಿಗಳ ಅನುದಾನ ಒದಗಿಸಲಾಗಿದೆ. ಇದಲ್ಲದೆ ಆರ್.ಐ.ಇ ಬೆಂಗಳೂರು ಸಹಯೋಗದೊಂದಿಗೆ ಆಂಗ್ಲ ಭಾಷಾ ಬೋಧನೆಯ ಶಿಕ್ಷಕರಿಗೆ ತರಬೇತಿ ನೀಡಲಾಗುತ್ತಿದೆ. ಈ ಸಾಲಿನಲ್ಲಿ ಇಲ್ಲಿಯವರೆಗೆ 1461 ಶಿಕ್ಷಕರಿಗೆ ತರಬೇತಿ ಪೂರ್ಣಗೊಳಿಸಲಾಗಿದೆ.

(ವಿವರಗಳನ್ನು ಅನುಬಂಧ-05 ರಲ್ಲಿ ಒದಗಿಸಿದೆ)

2019-20ನೇ ಸಾಲಿನಿಂದ 1000 ಶಾಲೆಗಳಲ್ಲಿ 1ನೇ ತರಗತಿಯಿಂದ ಇಂಗ್ಲಿಷ್ ಮಾಧ್ಯಮದಲ್ಲಿ ಬೋಧನೆ ಪ್ರಾರಂಭಿಸಲು ಸಿದ್ಧತೆಗಳನ್ನು ನಡೆಸಲಾಗುತ್ತಿದೆ.

**ಖಾನ್ ಅಕಾಡೆಮಿ:**

**ಖಾನ್ ಅಕಾಡೆಮಿ ಸಹಭಾಗಿತ್ವದೊಂದಿಗೆ ಕನ್ನಡದಲ್ಲಿ ಗಣಿತ ಮತ್ತು ವಿಜ್ಞಾನ ವಿಷಯಗಳ ಸಂಪನ್ಮೂಲಗಳ ಪುನರ್ರಚನೆ**

ಗುಣಮಟ್ಟದ ಶೈಕ್ಷಣಿಕ ಸಂಪನ್ಮೂಲಗಳ ಬಳಕೆಗೆ ಸಮಾನ ಅವಕಾಶ ಕಲ್ಪಿಸಲು ಶಿಕ್ಷಕರು ಹಾಗೂ ವಿದ್ಯಾರ್ಥಿಗಳಿಗೆ ಕನ್ನಡದಲ್ಲಿ ಲಭ್ಯವಾಗುವಂತೆ ವೀಡಿಯೋಗಳು, ಅಭ್ಯಾಸ ಪುರವಣಿಗಳು, ಲೇಖನಗಳು ಮತ್ತು ಐಸಿಟಿ ಸಾಧನಗಳನ್ನು (ಟೂಲ್ಸ್) ಒಳಗೊಂಡ ಶೈಕ್ಷಣಿಕ ಇ-ಸಂಪನ್ಮೂಲಗಳನ್ನು ರಚಿಸಲು ಕರ್ನಾಟಕ ಸರ್ಕಾರವು ಖಾನ್ ಅಕಾಡೆಮಿ ಇಂಡಿಯಾದೊಂದಿಗೆ ದಿನಾಂಕ 13.09.2017 ರಂದು ಕರಾರು ಒಪ್ಪಂದ ಏರ್ಪಟ್ಟಿದೆ.

ಸದರಿ ಸಹಭಾಗಿತ್ವದಲ್ಲಿ, ಖಾನ್ ಅಕಾಡೆಮಿ ಇಂಡಿಯಾದಲ್ಲಿ ಈಗಾಗಲೇ ಲಭ್ಯವಿರುವ ಹಾಗೂ ಪ್ರಪಂಚದಾದ್ಯಂತ ಸಾವಿರಾರು ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಬಳಸುತ್ತಿರುವ 5ನೇ ತರಗತಿಯಿಂದ 10ನೇ ತರಗತಿಯ ಗಣಿತ ಮತ್ತು ವಿಜ್ಞಾನ ವಿಷಯಗಳ 5,500+ ವೀಡಿಯೋಗಳು ಮತ್ತು 20,000+ ಅಭ್ಯಾಸ ಪುರವಣಿಗಳನ್ನು ಒಳಗೊಂಡ ಶೈಕ್ಷಣಿಕ ಇ-ಸಂಪನ್ಮೂಲಗಳನ್ನು ಕನ್ನಡದಲ್ಲಿ ರಚಿಸಿ ಮತ್ತು ರಾಜ್ಯ ಪಠ್ಯಕ್ರಮಕ್ಕೆ ಮ್ಯಾಪಿಂಗ್ ಮಾಡುವ ಕಾರ್ಯವನ್ನು ರಾಜ್ಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಇಲಾಖೆಯು (ಡಿ.ಎಸ್.ಇ.ಆರ್.ಟಿ, ಕರ್ನಾಟಕ) ನಿರ್ವಹಿಸುತ್ತಿದೆ.

ಖಾನ್ ಅಕಾಡೆಮಿ ಕನ್ನಡ ಎಂಬ youtube ಚಾನಲ್ ಪ್ರಾರಂಭಿಸಲಾಗಿದ್ದು ಪ್ರಸ್ತುತ 10ನೇ ತರಗತಿಯ ಗಣಿತ ವಿಷಯಕ್ಕೆ ಸಂಬಂಧಿಸಿದ ವಿಡಿಯೋಗಳನ್ನು ಅಪ್‌ಲೋಡ್ ಮಾಡಲಾಗಿದೆ. ಪ್ರತಿ ವಿಡಿಯೋಗೂ ಸಂಬಂಧಿಸಿದ ಅಭ್ಯಾಸಗಳನ್ನು ಕನ್ನಡದಲ್ಲಿ ತರ್ಜುಮೆ ಮಾಡಿ ಪ್ರತ್ಯೇಕ ವೆಬ್‌ಸೈಟ್‌ನಲ್ಲಿ ಈ ವಿಡಿಯೋ ಮತ್ತು ಅಭ್ಯಾಸಗಳು ವಿದ್ಯಾರ್ಥಿಗಳ ಬಳಕೆಗೆ ತರಲಾಗುವುದು. ಜನವರಿ 2019ರಲ್ಲಿ ಸದರಿ ವೆಬ್‌ಸೈಟನ್ನು ಪ್ರಾರಂಭಿಸಲಾಗುವುದು.

ಖಾನ್ ಅಕಾಡೆಮಿ ಕನ್ನಡ ಸಂಪನ್ಮೂಲವನ್ನು ರಾಜ್ಯದ 5 ರಿಂದ 10 ತರಗತಿಯ ಕನ್ನಡ ಮಾಧ್ಯಮದ 54.76 ಲಕ್ಷ ವಿದ್ಯಾರ್ಥಿಗಳು ಹಾಗೂ ಸುಮಾರು ಒಂದು ಲಕ್ಷ ಶಿಕ್ಷಕರು ಮುಕ್ತವಾಗಿ ಈ ಸಂಪನ್ಮೂಲಗಳನ್ನು ಶೈಕ್ಷಣಿಕ ಪ್ರಕ್ರಿಯೆಯಲ್ಲಿ ಬಳಸಿಕೊಳ್ಳುತ್ತಾರೆ. ಶಿಕ್ಷಕರು ತರಗತಿ ಅಗತ್ಯತೆ ಹಾಗೂ ವಿದ್ಯಾರ್ಥಿಗಳ ಕಲಿಕಾ ಮಟ್ಟಕ್ಕೆ ತಕ್ಕಂತೆ ಸಂಪನ್ಮೂಲಗಳನ್ನು,

| | | |
|---|---|---|
| | | ವೈಯಕ್ತಿಕ ಡ್ಯಾಶ್ ಬೋರ್ಡ್, ಅನಾಲಿಟಿಕ್ಸ್ ಮತ್ತು ಶೈಕ್ಷಣಿಕ ಐಸಿಟಿ ಸಾಧನಗಳನ್ನು ಬಳಸಿಕೊಳ್ಳಬಹುದಾಗಿದೆ.<br>**Student Content**<br>**MHRD Initiative** ಆದ ದೀಕ್ಷ ಪೋರ್ಟಲ್‌ನಲ್ಲಿ ಇಲ್ಲಿಯವರೆಗೆ 04 ರಿಂದ 10ನೇ ತರಗತಿವರೆಗೆ ವಿಷಯಾವಾರು 765 ಸಂಪನ್ಮೂಲಗಳನ್ನು ಅಪ್‌ಲೋಡ್ ಮಾಡಲಾಗಿದೆ. ಇದನ್ನು ಶಿಕ್ಷಕರು ಹಾಗೂ ಮಕ್ಕಳು ದೀಕ್ಷ ಪೋರ್ಟ್‌ಲ್ ಮೂಲಕ ಡೌನ್‌ಲೋಡ್ ಮಾಡಿ ಬಳಸಬಹುದಾಗಿದೆ.<br>**DSERT** ವೆಬ್‌ಸೈಟ್‌ನಲ್ಲಿ ಕಲಿಕಾ ಸಾಮಗ್ರಿಗಳ ಪುಟದಲ್ಲಿ 503 ಎಡುಸ್ಯಾಟ್ ವಿಡಿಯೊಗಳು (04 ರಿಂದ 8ನೇ ತರಗತಿವರೆಗೆ) ಅಮೃತ ಓಲ್ಯಾಬ್ಸ್ ವಿಜ್ಞಾನ ಪ್ರಯೋಗಗಳು ಬಳಕೆಗೆ ಲಭ್ಯವಿರುತ್ತದೆ. |

ಇಡಿ 290 ಮಾಹಿತಿ 2018

(ಹೆಚ್.ಡಿ.ಕುಮಾರಸ್ವಾಮಿ)
ಮುಖ್ಯಮಂತ್ರಿ

ಅನುಬಂಧ-1 LCQ 1147

7

| List Of Schools Under Taken Under Rashtriya Madhyamika Shiksha Abhiyana Karnataka | | | | |
|---|---|---|---|---|
| Annexure -01 For LCQ 1147 | | | | |
| Sl No. | Name of the District | Adarsha Vidyalaya | Up Gradation | Strengthening |
| 1 | BANGALORE URBAN | 0 | 7 | 31 |
| 2 | BANGALORE RURAL | 0 | 6 | 38 |
| 3 | CHIKBALLAPURA | 4 | 3 | 36 |
| 4 | RAMANAGAR | 2 | 3 | 23 |
| 5 | KOLAR | 3 | 5 | 52 |
| 6 | DAVANAGERE | 1 | 6 | 84 |
| 7 | CHITRADURGA | 2 | 5 | 55 |
| 8 | SHIMOGA | 0 | 6 | 59 |
| 9 | TUMKUR | 0 | 3 | 42 |
| 10 | MADHUGIRI | 1 | 2 | 34 |
| 11 | MYSORE | 6 | 12 | 80 |
| 12 | MANDYA | 2 | 3 | 76 |
| 13 | CHAMARAJ NAGAR | 4 | 2 | 22 |
| 14 | KODAGU | 0 | 1 | 21 |
| 15 | HASSAN | 1 | 0 | 80 |
| 16 | CHIKKAMAGALUR | 0 | 3 | 48 |
| 17 | UDUPI | 0 | 2 | 34 |
| 18 | DAKSHINA KANNADA | 0 | 4 | 61 |
| 19 | BELGAUM | 2 | 4 | 77 |
| 20 | CHIKKODI | 2 | 11 | 88 |
| 21 | BAGALKOT | 6 | 18 | 36 |
| 22 | BIJAPUR | 5 | 19 | 82 |
| 23 | DHARWAD | 2 | 7 | 46 |
| 24 | GADAG | 2 | 19 | 33 |
| 25 | HAVERI | 0 | 9 | 68 |
| 26 | SIRSI | 0 | 5 | 22 |
| 27 | UTTAR KANNADA | 0 | 5 | 17 |
| 28 | GULBARGA | 7 | 19 | 90 |
| 29 | BIDAR | 4 | 11 | 32 |
| 30 | YADGIR | 3 | 10 | 49 |
| 31 | KOPPAL | 4 | 17 | 24 |
| 32 | BELLARY | 6 | 5 | 32 |
| 33 | RAICHUR | 5 | 22 | 54 |
| | Total | 74 | 254 | 1626 |

ಅನುಬಂಧ-3 LCQ.1142

| Sl.No | District Name | Total No.of Schools | ವಿವಿಧ ಕಾರ್ಯಕ್ರಮಗಡಿ ಈವರೆಗೆ ಪೂರೈಸಿರುವ ಶಾಲೆಗಳು ಮತ್ತು ಸಾಮಗ್ರಿಗಳು<br>Laptops/ LCD Projector | 2018-19ನೇ ಸಾಲಿನಲ್ಲಿ ಪೂರೈಸಲಿರುವ ಸಾಮಗ್ರಿಗಳು<br>Laptops / LCD Projector | ಉಳಿಕೆ ಶಾಲೆಗಳು |
|---|---|---|---|---|---|
| | **ಐಸಿಟಿ@ಸ್ಕೂಲ್ಸ್ ಕಾರ್ಯಕ್ರಮದಡಿಯಲ್ಲಿ ಸರ್ಕಾರಿ ಪ್ರೌಢಶಾಲೆಗಳಿಗೆ ಪೂರೈಸಿರುವ ಕಂಪ್ಯೂಟರ್ ಮತ್ತು ಪೂರಕ ಸಾಮಗ್ರಿಗಳ ವಿವರ** | | | | |
| 1 | Bagalakote | 182 | 66 | 42 | 74 |
| 2 | Bangalore Rural | 63 | 31 | 10 | 22 |
| 3 | Bangalore North | 57 | 38 | 18 | 1 |
| 4 | Bangalore Urban | 85 | 49 | 11 | 25 |
| 5 | Belagavi | 129 | 46 | 30 | 53 |
| 6 | Bellary | 194 | 50 | 37 | 107 |
| 7 | Bidar | 166 | 44 | 35 | 87 |
| 8 | Chamarajanagar | 169 | 45 | 16 | 108 |
| 9 | Chikkaballapura | 111 | 77 | 10 | 24 |
| 10 | Chikkamagalur | 170 | 67 | 16 | 87 |
| 11 | Chikkodi | 116 | 63 | 30 | 23 |
| 12 | Chitradurga | 113 | 36 | 28 | 49 |
| 13 | Dakshina Kannada | 169 | 58 | 30 | 81 |
| 14 | Davanagere | 158 | 50 | 14 | 94 |
| 15 | Dharwad | 106 | 72 | 6 | 28 |
| 16 | Gadag | 113 | 52 | 14 | 47 |
| 17 | Hassan | 241 | 95 | 40 | 106 |
| 18 | Haveri | 140 | 55 | 24 | 61 |
| 19 | Kalburgi | 292 | 56 | 44 | 192 |
| 20 | Kodagu | 47 | 40 | 2 | 5 |
| 21 | Kolar | 125 | 37 | 29 | 59 |
| 22 | Koppal | 153 | 20 | 14 | 119 |
| 23 | Madhugiri | 95 | 36 | 15 | 44 |
| 24 | Mandya | 215 | 66 | 25 | 124 |
| 25 | Mysore | 232 | 73 | 36 | 123 |
| 26 | Raichur | 194 | 54 | 11 | 129 |
| 27 | Ramanagar | 107 | 46 | 15 | 46 |
| 28 | Shivamogga | 164 | 77 | 24 | 63 |
| 29 | Sirsi | 74 | 14 | 26 | 34 |
| 30 | Tumkur | 133 | 62 | 21 | 50 |
| 31 | Uttara Kannada | 49 | 14 | 6 | 29 |
| 32 | Udupi | 106 | 91 | 10 | 5 |
| 33 | Vijayapura | 152 | 54 | 30 | 68 |
| 34 | Yadagir | 122 | 16 | 31 | 75 |
| | **Total** | 4742 | 1750 | 750 | 2242 |

ಅನುಬಂಧ - ೦೨ LCQ. 1147

# LIST OF SCHOOLS IMPLEMENTING IT/ITEs SECTOR APPROVED DURING 2014-15

| S. No | District | Block | Name of the school | UDISE code |
|---|---|---|---|---|
| 1 | Bagalkot | Bagalkot | GOVT. PU COLLEGE FOR GIRLS BAGALKOT | 2902021120 |
| 2 | Bagalkot | Jamakhandi | GOVT GIRLS HS & JR.COLG JAMKHANDI | 2902090820 |
| 3 | Bangalore North | North - 4 | GPUC Yelahanka. Bangalore - 560 064 | 2928070019 |
| 4 | Bangalore North | North - 2 | GPUC for girls. Malleshwaram. 13th Cross, Bangalore- 560 003 | 29280500744 |
| 5 | Bangalore North | North - 2 | GPUC Jalahalli. Bangalore - 560 013 | 29280500431 |
| 6 | Bangalore North | North -4 | GPUC Jakkur. Bangalore - | 29280718309 |
| 7 | Bangalore North | North - 1 | GPUC Penya, SRS (Bus Stop) Penya. Bangalore-560 058 | 29280203117 |
| 8 | Bangalore Rural | Doddaballapura | G.J.C HS DODDABALLAPURA | 29210224859 |
| 9 | Bangalore Rural | Hosakote | GPUC Hosakote, Bangalore - 562 114 | 29210422033 |
| 10 | Bangalore Rural | Devanahalli | GPUC Vijayapura. Devanalli Taluk, Bangalore- 562 135 | 29210317033 |
| 11 | Bangalore South | Krishnaraja Puram | GOVT. PU COLLEGE KRISHNARAJA PURAM BANGALORE | 29200300130 |
| 12 | Bangalore South | South - 1 | GPUC for girls Basavangudi, BP wadia RD. Bangalore - 560 004 | 29200111142 |
| 13 | Bangalore South | Anekal | Govt. ASB composite PU college, Annekal. Bangalore - 562 106 | 29200401051 |
| 14 | Bangalore South | South - 4 | GOVT. PU COLLEGE KADUGODI. BANGALORE | 29200310514 |
| 15 | Bangalore South | South - 3 | GPU composite college Madivala. Hosur road. Bangalore- 560 068 | 29200903837 |
| 16 | Belgaum | Khanapur | GPUC Khanapur, Belgaum | 29010813416 |
| 17 | Belgaum Chickodi | Gokak | GOVT. EX-MUNICIPAL PU COLLEGE GOKAK BELGAUM DT | 29300603436 |
| 18 | Bellary | Bellary East | GPUC Ex Municipal Aanamtapur Road, Bellary - 583 101 | 29120901725 |
| 19 | Bellary | Hospet | GPUC T.B Dam, Hospet, Bellary- 583 225 | 29120507842 |
| 20 | Bidar | Bidar | GPUC for boys. Bidar-585 401 | 29050413981 |
| 21 | Bidar | Aurad | GPUC Aurad. Bidar-585 326 | 29050100132 |
| 22 | Bijapur | Bijapur City | GOVT PU COLLEGE FOR GIRLS BIJAPUR | 29031400919 |
| 23 | Bijapur | Basavan Bagewadi | GOVT S.B PU COLLEGE B.BAGEWADI | 29030324907 |
| 24 | Chamarajanagara | Kollegala | Govt. SVK PU colege for girls, Kollegal, Chamaraj Nagar- 571 440 | 29270520130 |
| 25 | Chamarajanagara | Chamarajanagara | GPUC for Boys, Chamarajanagara- 571 313 | 29270122802 |
| 26 | Chikkaballapura | Chikkaballapura | GPUC Chickaballapura. BB Road, Chikkaballapura | 29290327401 |
| 27 | Chikkaballapura | Shidlaghatta | GPUC Shidlghatta. Chickkaballapura | 29291128628 |
| 28 | Chikkaballapura | Chintamani | GPUC Girls Chintamani. Chickkaballapura | 29290441006 |
| 29 | Chikkaballapura | Bagepalli | GPUC Bagepalli. Chikkaballapura | 29290121937 |
| 30 | Chikkaballapura | Gowribidanur | Govt. SSEA PU College. Gowribidanur. Chickkaballapura | 29290524316 |
| 31 | Chikkamangalore | Sringeri | GPUC Simgeri. Chickmangaore - 577 139 | 29170103609 |
| 32 | Chitradurga | Chitradurga | GOVT.PU COLLEGE BOYS | 29130130321 |
| 33 | Chitradurga | Hiriyur | GOVT PU COLLEGE HIRIYUR | 29130315834 |
| 34 | Dakshina Kannada | Puttur | GOVT. PU COLLEGE PUTTUR DK DT 574201 | 29240407501 |
| 35 | Davangere | Davanagere(S) | GOVT SEETHAMMA PUC-K.B EXTN | 29140308606 |
| 36 | Davangere | Davanagere(S) | GOVT MOTHI VEERAPPA PUC-P.J.EXTN | 29140309206 |
| 37 | Davangere | Harihara | Govt. DRM PU college JC extn, Harihara, Davengere- 577 601 | 29140410601 |
| 38 | Dharwad | Hubli | GPUC GopanaKoppa, Hubli taluk. Dharwad- 580 023 | 29090205911 |
| 39 | Dharwad | Kundagol | GOVT. PU COLLEGE KAMADOLLI, DHARWAD DIST - 581 113 | 29090403205 |
| 40 | Gadag | Naragund | GOVT COMP JUN COL NARAGUND | 29080303125 |
| 41 | Gulbarga | Gulbarga | GPUC for Girls, oppt SP Office. Gulbarga- 585 105 | 29040534302 |
| 42 | Hassan | Arkalgudu | GOVT. PU COLLEGE FOR BOYS ARKALGUDU HASSAN DT 573102 | 29230228324 |
| 43 | Hassan | Holenarasipura | GGJC HOLENARASIPURA | 29230612135 |

(5)

| | | | | |
|---|---|---|---|---|
| 44 | Hassan | Belur | GOVT. PU COLLEGE BELUR HASSAN DT 573115 | 2923041194 |
| 45 | Haveri | Savanur | Govt. Mojid PU College Savanur. Haveri- 581 118 | 2911 750 |
| 46 | Haveri | Byadagi | Govt.SJJM PU college. Byadagi. Haveri- 581 106 | 2911010970 |
| 47 | Kodagu | Soma Warpet Tq | GOVT. PU College Kushalnagar. Somawarpet. Kodugu dist 571234 | 2925021860 |
| 48 | Kodagu | Virajpet | GOV JUNIOR COLLEGE PONNAMPET | 2925030471 |
| 49 | Kolar | Bangarpet | GOVT. PU COLLEGE FOR BOYS BANGARPET KOLAR DT 563114 | 2919023795 |
| 50 | Kolar | Kolar | GOVT. PU COLLEGE NARASAPURA KOLAR DT 563133 | 2919072520 |
| 51 | Koppal | Koppal | GPUC for girls Koppal, Koppal- 583 231 | 29070318005 |
| 52 | Koppal | Koppal | Govt.JR. BOYS'COLLEGE KOPPAL | 29070318006 |
| 53 | Mandya | Sriranga Patna | GJC, SRIRANGAPATNA | 29220711503 |
| 54 | Mysore | Mysore | GPUC for girls. Peoples park, Nazarbad. Mysore- 570 010 | 29260706707 |
| 55 | Mysore | Nanjanagud | GJC BOYS NANJANGUD TOWN | 29260928709 |
| 56 | Raichur | Devadurga | GOVT PU COLLEGE GIRLS DEVDURGA | 29060121602 |
| 57 | Raichur | Manvi | GOVT PU COLLEGE BOYS MANVI | 29060618808 |
| 58 | Raichur | Raichur | GOVT BOYS HIGHSCHOOL RAICHUR | 29060717302 |
| 59 | Ramanagara | Magadi | GPUC Magadi, Ramangara - 562 120 | 29320524923 |
| 60 | Ramanagara | Channapatna | GPUC for Girls Channapatna, Ramanagara | 29320713067 |
| 61 | Ramanagara | Channapatna | GOVT Boys COMPOSITE PU COLLEGE | 29320713066 |
| 62 | Ramanagara | Ramanagar | GPUC for Boys, Ramanagara. | 29320611291 |
| 63 | Shimoga | Bhadravati | GGPUC NEW TOWN BHADRAVATHI | 29150117306 |
| 64 | Shimoga | Thirthahalli | GPUC THIRTHAHALLI | 29150737804 |
| 65 | Tumkur | Tiptur Tq | GOVT. PU College, Nonavinakere, Tiptur tq. Tumkur Dist - 572224 | 29180803410 |
| 66 | Tumkur Madhugiri | Koratagere | GOVT. PU COLLEGE ,KORATAGERE ,TUMKUR DT 572129 | 29310321003 |
| 67 | Tumkur Madhugiri | Sira | GOVT. PU COLLEGE FOR GIRLS.SIRA.TUMKUR DT | 29310620207 |
| 68 | Udupi | Udupi | GOVT. PU COLLEGE FOR GIRLS ,UDUPI -576101 , | 29160213204 |
| 69 | Udupi | Kundapura | GOVT. PU COLLEGE .KUNDAPURA .UDUPI DT 576201 | 29160311003 |
| 70 | Udupi | Karkala Tq | GOVT. PU COLLEGE ,BYLOOR KARKALA TQ .UDUPI DT 574102 | 29160102603 |
| 71 | Uttara Kannada Sirsi | Sirsi Tq | GOVT. PU COLLEGE BANAVASI SIRSI TQ NK DT | 29340324102 |
| 72 | Uttara Kannada Sirsi | Haliyal | GPU SHIVAJI C. HALIYAL | 29340428007 |
| 73 | Uttara Kannada Sirsi | Mundgod | GPUC Mundgod, Uttara Kannada- 581 349 | 29341008323 |
| 74 | Yadgir | Shahapur | GOVT. PU COLLEGE SHAHAPUR YADGIR DT 585223 | 29330712338 |
| 75 | Yadgir | Yadgir | GOVT JR COLLEGE YADAGIR | 29331026207 |

ಅನುಬಂಧ-04

(2) LAQ 1147

# ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ


DEPARTMENT OF STATE EDUCATION RESEARCH AND TRAINING

ಡಿ ಎಸ್ ಇ ಆರ್ ಟಿ
DSERT

NO 4, 100 FT RING ROAD, BANASHANKARI 3RD STAGE
BANGALORE 560 085
E MAIL: doi.dsert@gmail.com http://dsert.kar.nic.in

TEL NO: 26422372
26422373
26422374
FAX NO: 26422377


## ಗುಣಮಟ್ಟದ ಶಿಕ್ಷಣಕ್ಕಾಗಿ ಡಿ.ಎಸ್.ಇ.ಆರ್.ಟಿ ಕೈಗೊಂಡಿರುವ ಕಾರ್ಯಕ್ರಮಗಳು

ಪ್ರತಿಯೊಂದು ಮಗುವು ಗುಣಮಟ್ಟದ ಶಿಕ್ಷಣವನ್ನು ಪಡೆಯಲು ಡಿ.ಎಸ್.ಇ.ಆರ್.ಟಿಯಿಂದ ನಡೆಸಿದ ಕಾರ್ಯಕ್ರಮಗಳು ಹಾಗು ತರಬೇತಿಗಳ ವಿವರ:

1. ತಂತ್ರಜ್ಞಾನ ಆಧಾರಿತ ಕಲಿಕಾ ಕಾರ್ಯಕ್ರಮ (ಟಿ.ಎ.ಎಲ್.ಪಿ.): ಹಲವು ಸ್ವತಂತ್ರ ಯೋಜನೆಗಳ ಬದಲಾಗಿ ಎಲ್ಲಾ ಸರ್ಕಾರಿ ಪ್ರೌಢಶಾಲೆ ಹಾಗೂ ಸರ್ಕಾರಿ ಪದವಿ ಪೂರ್ವ ಕಾಲೇಜುಗಳನ್ನೊಳಗೊಂಡ ಸಮಗ್ರವಾದ ತಂತ್ರಜ್ಞಾನ ಆಧಾರಿತ ಕಲಿಕಾ ಯೋಜನೆ ಅನುಷ್ಠಾನಗೊಳಿಸಿದೆ. ಇದರಡಿಯಲ್ಲಿ

   (i) ಶಿಕ್ಷಕರ ಸಬಲೀಕರಣ ತರಬೇತಿ ನಡೆಸಿದ್ದು ಇ-ಕಂಟೆಂಟ್ ತಯಾರಿಕೆ ಮತ್ತು ಕಲಿಕಾ ಸಾಮಗ್ರಿಗಳನ್ನು ಶಾಲೆಗಳಿಗೆ ತಲುಪಿಸಿದೆ.

   (ii) ಟೆಲಿಶಿಕ್ಷಣ ಕಾರ್ಯಕ್ರಮ : ರಾಜ್ಯದ 18 ಜಿಲ್ಲೆಗಳ 300 ಪ್ರಾಥಮಿಕ ಮತ್ತು 700 ಪ್ರೌಢ ಶಾಲೆಗಳಲ್ಲಿ ಐ.ಐ.ಎಂ.ಬಿ ಸಹಯೋಗದೊಂದಿಗೆ ದ್ವಿಮುಖ ಆಡಿಯೋ ಮತ್ತು ವೀಡಿಯೋ ಸಂವಹನವಿರುವ ಟೆಲಿ ಶಿಕ್ಷಣ ಕಾರ್ಯಕ್ರಮವನ್ನು ಪ್ರಸಾರ ಮಾಡಲಾಗುತ್ತಿದೆ.

2. ಸಿಸಿಇ ಪದ್ಧತಿ ಅಳವಡಿಕೆ : ರಾಜ್ಯದ ಎಲ್ಲ ಶಾಲೆಗಳಲ್ಲಿ 1 ರಿಂದ 10 ನೇ ತರಗತಿಯವರೆಗೆ ನಿರಂತರ ಹಾಗೂ ವ್ಯಾಪಕ ಮೌಲ್ಯಮಾಪನ (**CCE-Continuous & Comprehensive Evaluation**) ಅನುಷ್ಠಾನಕ್ಕೆ ತರಲಾಗಿದೆ.

3. ರಾಷ್ಟ್ರೀಯ ಪ್ರತಿಭಾನ್ವೇಷಣಾ ಪರೀಕ್ಷೆ (NTSE) : 10ನೇ ತರಗತಿಯಲ್ಲಿ ಅಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳಿಗೆ National Talent Search Examination (NTSE) ಹಾಗೂ 8ನೇ ತರಗತಿಯಲ್ಲಿ ಅಭ್ಯಾಸ ಮಾಡುತ್ತಿರುವವರಿಗೆ National Means-Cum-Merit Scholarship (NMMS) ಎಂಬ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ನಡೆಸಲಾಗುತ್ತಿದೆ.

4. ಗಣಿತ ಕಲಿಕಾ ಆಂದೋಲನ: ಅಕ್ಷರ ಫೌಂಡೇಶನ್ ಸಹಯೋಗದೊಂದಿಗೆ ರಾಜ್ಯದ ಆರು ಜಿಲ್ಲೆಗಳಲ್ಲಿ ಆಯ್ಕೆಯಾದ ಸರ್ಕಾರಿ ಪ್ರಾಥಮಿಕ ಶಾಲೆಗಳ 4 ಮತ್ತು 5 ನೇ ತರಗತಿಯ ಮಕ್ಕಳಿಗಾಗಿ 'ಗಣಿತ ಕಲಿಕಾ ಆಂದೋಲನ' ವನ್ನು ನಡೆಸಲಾಗುತ್ತಿದೆ.

5. ಇಂಗ್ಲಿಷ್ ಭಾಷಾ ಸಬಲೀಕರಣ ಸನಿವಾಸ ತರಬೇತಿ :ಕರ್ನಾಟಕ ರಾಜ್ಯದಲ್ಲಿ ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರ ಇಂಗ್ಲಿಷ್ ಭಾಷಾ ಸಬಲೀಕರಣಕ್ಕಾಗಿ ಇಂಗ್ಲಿಷ್ ಭಾಷಾ ಕೌಶಲವನ್ನು ವೃದ್ಧಿಸಲು ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರಿಗೆ ದೀರ್ಘಾವಧಿಯ 30 ದಿನಗಳ ಸನಿವಾಸ ತರಬೇತಿಯನ್ನು ನೀಡಿ ಶಿಕ್ಷಕರನ್ನು ಸಬಲೀಕರಣಗೊಳಿಸಲಾಗುತ್ತಿದೆ.

6. ಪ್ರಥಮ್ ಸಂಸ್ಥೆಯ ಸಹಯೋಗದೊಂದಿಗೆ ಆಯೋಜಿಸಲಾದ "ಓದು ಕರ್ನಾಟಕ" ಕಾರ್ಯಕ್ರಮ: ಸರ್ಕಾರಿ ಕನ್ನಡ ಮಾಧ್ಯಮ ಶಾಲೆಗಳ ನಾಲ್ಕು ಮತ್ತು ಐದನೇ ತರಗತಿಗಳಲ್ಲಿ ಅಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳ ಕನ್ನಡ ಮತ್ತು ಗಣಿತ ವಿಷಯಗಳಲ್ಲಿನ ಕಲಿಕಾ ಮಟ್ಟವನ್ನು ಉತ್ತಮಪಡಿಸಲು ಪ್ರಥಮ್ ಸಂಸ್ಥೆಯ ಸಹಯೋಗದೊಂದಿಗೆ "ಓದು ಕರ್ನಾಟಕ" ಕಾರ್ಯಕ್ರಮವನ್ನು ರಾಜ್ಯದ 13 ಜಿಲ್ಲೆಗಳಲ್ಲಿ ಜಾರಿಗೆ ತರಲಾಗಿದೆ.

7. ಕಲಿಕಾ ಫಲಗಳು: ಪ್ರತಿಯೊಂದು ಮಗುವು ಗುಣಮಟ್ಟದ ಶಿಕ್ಷಣವನ್ನು ಪಡೆಯಲು ಮಕ್ಕಳ ಅವಶ್ಯಕ ಕಲಿಕಾ ಮಟ್ಟವನ್ನು ಗುರುತಿಸಿ ಅವರ ಸಾಧನೆಯನ್ನು ಕಾಲಕಾಲಕ್ಕೆ ಅಳೆದು ಸೂಕ್ತ ಮಾರ್ಗದರ್ಶನ ನೀಡಲು 1 ರಿಂದ 8 ನೇ ತರಗತಿಗಳಿಗೆ ತರಗತಿವಾರು ಪ್ರತಿ ವಿಷಯದಲ್ಲಿ ಪೋಷಕರಿಗೆ, ವಿದ್ಯಾರ್ಥಿಗಳಿಗೆ ಮತ್ತು ಶಿಕ್ಷಕರಿಗೆ ಪ್ರತ್ಯೇಕವಾಗಿ ಕಲಿಕಾ ಫಲಗಳನ್ನು ಸಿದ್ಧಪಡಿಸಲಾಗಿದೆ.

8. "ಗುರುಚೇತನ": (ಶಿಕ್ಷಕರ ವೃತ್ತಿಪರ ಅಭಿವೃದ್ಧಿ ತರಬೇತಿ) (TPD): ಶಿಕ್ಷಕರ ತರಬೇತಿಯ ಅಗತ್ಯತೆಗಳನ್ನು ಗುರುತಿಸಿ ಪ್ರತಿ ಶಿಕ್ಷಕರಿಗೆ ಅವರ ವೃತ್ತಿಪರ ಕೌಶಲ್ಯವನ್ನು ಹೆಚ್ಚಿಸಿಕೊಂಡು ಗುಣಾತ್ಮಕ ಶಿಕ್ಷಣವನ್ನು ಮಕ್ಕಳಿಗೆ ನೀಡುವ ದಿಸೆಯಲ್ಲಿ "ಗುರುಚೇತನ" ಎನ್ನುವ ಅಗತ್ಯಾಧಾರಿತ ತರಬೇತಿಯನ್ನು 1 ರಿಂದ 8 ನೇ ತರಗತಿ ಬೋಧಿಸುತ್ತಿರುವ ಪ್ರಾಥಮಿಕ ಶಾಲಾ ಶಿಕ್ಷಕರಿಗೆ 2017-18 ನೇ ಸಾಲಿನಿಂದ ಪ್ರಾರಂಭಿಸಲಾಗಿದೆ. ಈ ಕಾರ್ಯಕ್ರಮದಡಿಯಲ್ಲಿ 71000 ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಅವರು ಆಯ್ಕೆ ಮಾಡಿದ ತರಬೇತಿಯನ್ನು ನೀಡಲಾಗಿದೆ.

LCQ-1147 (8) (2)

9. ವಿಶ್ವಾಸ ಕಿರಣ: ರಾಜ್ಯದಲ್ಲಿ 9 ಮತ್ತು 10 ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಕಲಿಕೆಯಲ್ಲಿ ಹಿಂದುಳಿದಿರುವ ಇತರೆ ವಿದ್ಯಾರ್ಥಿಗಳ ಕಲಿಕೆಯನ್ನು ಉತ್ತಮಪಡಿಸಿ ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸವನ್ನು ಮೂಡಿಸಲು ವಿಶ್ವಾಸ ಕಿರಣ ಎಂಬ ವಿಶೇಷ ಬೋಧನಾ ತರಬೇತಿಯನ್ನು ಹಮ್ಮಿಕೊಳ್ಳಲಾಗಿದೆ.

10. ಅಭ್ಯಾಸ ಪುಸ್ತಕಗಳ ತಯಾರಿಕೆ: 4,5,6,7,8 ಮತ್ತು 9 ನೇ ತರಗತಿಗಳಿಗೆ ಕನ್ನಡ ಮತ್ತು ಗಣಿತ ವಿಷಯಗಳಲ್ಲಿ ಹಾಗೂ 5,6,7,8 ಮತ್ತು 9 ನೇ ತರಗತಿಗಳಿಗೆ ಇಂಗ್ಲಿಷ್ ವಿಷಯದಲ್ಲಿ ಅಭ್ಯಾಸ ಪುಸ್ತಕಗಳನ್ನು ರಚಿಸಿ ರಾಜ್ಯದ ಎಲ್ಲಾ ಸರ್ಕಾರಿ ಶಾಲೆಗಳಿಗೆ ಸರಬರಾಜು ಮಾಡಲಾಗಿದೆ.

11. ನೂತನ ಎನ್.ಸಿ.ಇ.ಆರ್.ಟಿ ಪಠ್ಯಪುಸ್ತಕಗಳ ಬಗ್ಗೆ ಶಿಕ್ಷಕರಿಗೆ ತರಬೇತಿ: 2017–18 ನೇ ಸಾಲಿನಲ್ಲಿ 9 ನೇ ತರಗತಿಗೆ ಎನ್.ಸಿ.ಇ.ಆರ್.ಟಿ.ಯ ಗಣಿತ ಮತ್ತು ವಿಜ್ಞಾನದ ವಿಷಯಗಳ ಪಠ್ಯಪುಸ್ತಕಗಳನ್ನು ಅಳವಡಿಸಿದ್ದು ಅದನ್ನಾಧರಿಸಿ ಶಿಕ್ಷಕರಿಗೆ ತರಬೇತಿ ನೀಡಲಾಗಿದ್ದು 10ನೇ ತರಗತಿಗೆ 2018–19 ನೇ ಸಾಲಿನಲ್ಲಿ ಸದರಿ ವಿಷಯಗಳ ಪಠ್ಯಪುಸ್ತಕಗಳನ್ನು ಅಳವಡಿಸುತ್ತಿದ್ದು ಅದರನ್ವಯ ತರಬೇತಿ ನೀಡಲಾಗುವುದು.

12. ಬೇಸಿಗೆ ಸಂಭ್ರಮ : ಬೇಸಿಗೆ ರಜೆಯಲ್ಲಿ 6 ರಿಂದ 7 ನೇ ತರಗತಿಯವರೆಗಿನ ವಿದ್ಯಾರ್ಥಿಗಳಿಗೆ "ಸ್ವಲ್ಪ ಕಲಿಕೆ ಸ್ವಲ್ಪ ಮೋಜು" ಆಧಾರಿತ ಬೇಸಿಗೆ ಸಂಭ್ರಮ ಕಲಿಕಾ ಯೋಜನೆಯನ್ನು ರೂಪಿಸಿ 2017–18 ನೇ ಸಾಲಿನಿಂದ ಪ್ರಥಮ್ ಸಂಸ್ಥೆಯ ಸಹಯೋಗದೊಂದಿಗೆ ಅನುಷ್ಠಾನಗೊಳಿಸಲಾಗಿದೆ.

13. ಯೋಜನಾ ಕಾರ್ಯಕ್ರಮಗಳು: ಡಯಟ್‌ಗಳ ಮೂಲಕ ಶೈಕ್ಷಣಿಕ ಕಾರ್ಯಕ್ರಮಗಳನ್ನು ಯೋಜನಾ ರೂಪದಲ್ಲಿ ಅನುಷ್ಠಾನಗೊಳಿಸಲು ಕ್ರಮ ವಹಿಸಲಾಗಿದೆ.

14. ಮಕ್ಕಳ ಶಾಲಾ ಬ್ಯಾಗ್ ತೂಕ ಕಡಿಮೆ ಮಾಡಲು ವರದಿ: ಮಕ್ಕಳ ಶಾಲಾ ಬ್ಯಾಗ್ ತೂಕ ಕಡಿಮೆ ಮಾಡುವ ಬಗ್ಗೆ ಸಾರ್ವಜನಿಕರಿಂದ ಅಭಿಪ್ರಾಯ ಸಂಗ್ರಹಿಸಿ ಶಾಲೆಗಳಿಗೆ ಭೇಟಿ ನೀಡಿ ಮಾಹಿತಿ ಸಂಗ್ರಹಿಸಿ ಅದರನ್ವಯ ವರದಿಯನ್ನು ತಯಾರಿಸಿ ಮಾನ್ಯ ಸರ್ಕಾರದ ಕಾರ್ಯದರ್ಶಿಗಳು ಹಾಗೂ ಮಾನ್ಯ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ ರವರಿಗೆ ಸಲ್ಲಿಸಿದೆ. ಈ ವರದಿಯನ್ವಯ ಶಾಲೆಗಳಲ್ಲಿ ಪಾಲಿಸಬೇಕಾದ ಸೂಕ್ತ ನಿಯಮಗಳನ್ನು ರೂಪಿಸಿದ್ದು ನಿಯಮಗಳನ್ನು ಜಾರಿಗೊಳಿಸಲು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ. ಪಠ್ಯಪುಸ್ತಕಗಳ ಭಾರವನ್ನು ಕಡಿಮೆ ಮಾಡಲು 250 ಪುಟಕ್ಕಿಂತಲೂ ಹೆಚ್ಚಿರುವ ಪಠ್ಯಪುಸ್ತಕಗಳನ್ನು ಎರಡು ಭಾಗಗಳಾಗಿ ಮುದ್ರಿಸಿದೆ. 4 ರಿಂದ 9 ನೇ ತರಗತಿಗಳಿಗೆ ಸಿದ್ಧಪಡಿಸಿರುವ ಅಭ್ಯಾಸ ಪುಸ್ತಕಗಳನ್ನು ಎರಡು ಭಾಗಗಳಾಗಿ ಮುದ್ರಿಸಿದೆ.

15. ವೃತ್ತಿ ಮತ್ತು ವಿಶೇಷ ಶಿಕ್ಷಕರಿಗೆ ತರಬೇತಿ: ಆರ್.ಎಂ.ಎಸ್.ಎ ಅಡಿಯಲ್ಲಿ ವೃತ್ತಿ ಶಿಕ್ಷಕರು (ಹೊಲಿಗೆ, ಮರಗೆಲಸ, ತೋಟಗಾರಿಕೆ) ಹಾಗೂ ವಿಶೇಷ ಶಿಕ್ಷಕರಿಗೆ (ಸಂಗೀತ, ನೃತ್ಯ, ನಾಟಕ, ಚಿತ್ರಕಲೆ) ಪಠ್ಯವಿಷಯಗಳನ್ನು ಅಂತರ್ಗತಗೊಳಿಸಿ ಪ್ರಪ್ರಥಮವಾಗಿ 10 ದಿನಗಳ ತರಬೇತಿಯನ್ನು ನೀಡಲಾಗಿದೆ. ಈ ತರಬೇತಿಗಳಿಂದ ಮನಶ್ಚೇತನಗೊಂಡ ಶಿಕ್ಷಕರು ಅವರವರ ಕಲೆಗಳನ್ನು ಮತ್ತು ಕೈಕೆಲಸವನ್ನು ಡಯಟ್ ಹಾಗೂ ಶಾಲಾ ಹಂತದಲ್ಲಿ ಬಿತ್ತರಿಸಿರುತ್ತಾರೆ.

16. NAS ಮತ್ತು CSAS ಪರೀಕ್ಷೆ ಆಧಾರಿತ ಪರಿಹಾರ ಬೋಧನೆ: 2017–18ನೇ ಸಾಲಿನಲ್ಲಿ ರಾಜ್ಯದ ಎಲ್ಲಾ ಸರ್ಕಾರಿ ಹಾಗೂ ಅನುದಾನಿತ ಶಾಲೆಗಳ 4 ರಿಂದ 9ನೇ ತರಗತಿಯವರೆಗಿನ ಎಲ್ಲಾ ವಿದ್ಯಾರ್ಥಿಗಳಿಗೆ ಕೈಗೊಂಡ ಗಣತಿ ಆಧಾರಿತ ರಾಜ್ಯ ಸಾಧನಾ ಸಮೀಕ್ಷೆ (CSAS) ಹಾಗೂ 3,5, ಮತ್ತು 8 ನೇ ತರಗತಿಗಳಿಗೆ ಕೈಗೊಂಡ ರಾಷ್ಟ್ರೀಯ ಸಾಧನಾ ಪರೀಕ್ಷೆ ಯನ್ವಯ ಸಿದ್ಧಪಡಿಸಿದ ಫಲಿತಾಂಶವನ್ನು ಆಧರಿಸಿ ಕಡಿಮೆ ಸಾಧನೆ ಮಾಡಿರುವ ಮಕ್ಕಳಿಗೆ ಪರಿಹಾರ ಬೋಧನೆ ಕಾರ್ಯದ ಪ್ರಕ್ರಿಯೆ ಪ್ರಾರಂಭಿಸಿದೆ.

ನಿರ್ದೇಶಕರು,
ಡಿ.ಎಸ್.ಇ.ಆರ್.ಟಿ.,
ಬೆಂಗಳೂರು.

ಅನುಬಂಧ-೦೫

LCQ-(114)

## progress report of primary school teachers for 30 days (30.11.2018)

| | | Target | | Progress | | |
|---|---|---|---|---|---|---|
| Sl.no | Diet Name | PHY | Fin | PHY | Fin | Remarks |
| 1 | Bangalore North | 45 | 480000 | 45 | 6,7,500 | training pro |
| 2 | Bangalore South | 45 | 480000 | 45 | 1,90,000 | |
| 3 | Bangalore Rural | 45 | 480000 | 45 | _ | NO DRAW |
| 4 | Bagalakote | 45 | 480000 | 45 | 3,52,023 | |
| 5 | Ballari | 45 | 480000 | 44 | 4,51,355 | SEIN READY |
| 6 | Belagavi | 90 | 480000 | 54 | 4,66,000 | training pro |
| 7 | Bidar | 45 | 480000 | | | |
| 8 | Bijapura | 90 | 480000 | 43 | | training pro |
| 9 | Chamarajanagara | 45 | 480000 | 45 | 480000 | |
| 10 | Chikkaballapura | 45 | 480000 | 45 | | |
| 11 | Chikkamagaluru | 45 | 480000 | 43 | | PROCESS |
| 12 | Belagavi Chikkodi | 90 | 480000 | 90 | 4,80,000 | |
| 13 | Chidradurga | 45 | 480000 | 45 | 299545 | |
| 14 | S.kannada | 45 | 480000 | 45 | 4,80,000 | |
| 15 | Davanagere | 45 | 480000 | 40 | 2,80,000 | |
| 16 | Daravada | 45 | 480000 | 50 | | |
| 17 | Gadaga | 45 | 480000 | 45 | | |
| 18 | Gulbarga | 90 | 480000 | | | start from 12th |
| 19 | Hasan | 45 | 480000 | 45 | 572,000 | |
| 20 | Haveri | 45 | 480000 | 50 | | |
| 21 | kodagu | 45 | 480000 | 45 | | |
| 22 | Kolar | 45 | 480000 | 29 | 3,24,000 | |
| 23 | Koppala | 45 | 480000 | 45 | | |
| 24 | Madhugiri | 45 | 480000 | 45 | 4,80,000 | |
| 25 | Mandya | 45 | 480000 | 42 | 4,26,610 | |
| 26 | Mysore | 45 | 480000 | 45 | | training pro |
| 26 | Raichur | 45 | 480000 | 45 | 6,25,000 | |
| 28 | Ramanagar | 45 | 480000 | 45 | | traini9ng pro |
| 29 | Shivamoga | 45 | 480000 | 40 | | PROCESS |
| 30 | Tumkur | 45 | 480000 | 38 | 2,73,870 | |
| 31 | Udupi | 45 | 480000 | 43 | | |
| 32 | U.kannada | 45 | 480000 | 45 | | PROCESS |
| 33 | Shirsi | 45 | 480000 | 45 | 70000 | PROCESS |
| 34 | Yadagiri | 45 | 480000 | 45 | | PROCESS |
| | | | | | | |
| | **Total** | **1710** | **16320000** | **1461** | **1421545** | |